ಓ ಎಸ್ ಸಂಖ್ಯೆ: 270/2016
ಪಿ.ಡಬ್ಲ್ಯೂ: 01 (ಸುಬ್ರಮಣಿ)

ದಿನಾಂಕಃ 28.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಎಂ ವಕೀಲರಿಂದಃ**

8. ನಮ್ಮ ಕುಟುಂಬದ ಮೂಲ ಪುರುಷ ಮುನಿಯಪ್ಪ ಎಂದರೆ ಸರಿ. ಸದರಿ ಮುನಿಯಪ್ಪನಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1)ದೊಡ್ಡ ಮುನಿಶಾಮಿ @ ತೇಲಿ ಮುನಿಶಾಮಿ, 2)ಮುನಿಶಾಮಿ @ ಚಿಕ್ಕ ಮುನಿಶಾಮಿ ಹಾಗೂ 3)ಕೊಂಡಕ್ಕ. ತೇಲಿ ಮುನಿಶಾಮಿಯ ಹೆಂಡತಿಯ ಹೆಸರು ಸೀತಮ್ಮ ಎಂದರೆ ಸರಿ. ಅವರಿಬ್ಬರಿಗೆ ಪಾರ್ವತಮ್ಮ ಎಂಬ ಒಬ್ಬಳೇ ಮಗಳು ಇದ್ದಳು ಎಂದರೆ ಸರಿ. ಅವರಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ. ಪಾರ್ವತಮ್ಮ ತೀರಿಕೊಂಡು ಸುಮಾರು 12-13 ವರ್ಷಗಳಾಗಿದೆ.

9. ಮುನಿಶಾಮಿ @ ಚಿಕ್ಕ ಮುನಿಶಾಮಿ ರವರ ಹೆಂಡತಿಯ ಹೆಸರು ನಾರಾಯಣಮ್ಮ ಎಂದರೆ ಸರಿ. ಅವರಿಬ್ಬರಿಗೆ ದೊಡ್ಡ ರೆಡ್ಡಮ್ಮ ಹಾಗೂ ಚಿಕ್ಕ ರೆಡ್ಡೆಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಅವರಿಗೆ ಯಾವುದೇ ಗಂಡು ಸಂತತಿ ಇರಲಿಲ್ಲ ಎಂದರೆ ಸರಿ.

10. ಕೊಂಡಕ್ಕನನ್ನು ಅದೇ ಊರಿಗೆ ಚಂಗಪ್ಪ ನಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ಅವರಿಬ್ಬರಿಗೆ ಸುಬ್ಬಣ್ಣ ಮತ್ತು ಅಕ್ಕುಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಸುಬ್ಬಣ್ಣನ ಹೆಂಡತಿಯ ಹೆಸರು ಲಿಂಗಮ್ಮ ಎಂದರೆ ಸರಿ. ಅವರಿಗೆ ಈ ದಾವೆಯ 1 ರಿಂದ 3 ನೇ ಪ್ರತಿವಾದಿಯರಾದ ರೆಡ್ಡಪ್ಪ, ಚಿಕ್ಕರೆಡ್ಡಪ್ಪ ಹಾಗೂ ರೆಡ್ಡಮ್ಮ ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ಅಕ್ಕುಲಪ್ಪ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. 1 ನೇ ಹೆಂಡತಿ ಚೆನ್ನಕ್ಕ ಹಾಗೂ 2 ನೇ ಹೆಂಡತಿ ಪಾರ್ವತಮ್ಮ ಎಂದರೆ ಸರಿ. ಚೆನ್ನಕ್ಕನ ಮಕ್ಕಳೇ 2 ಮತ್ತು 3 ನೇ ವಾದಿಗಳಾದ ನಾವುಗಳು ಎಂದರೆ ಸರಿ. ಅಕ್ಕುಲಪ್ಪನ 2 ನೇ ಹೆಂಡತಿ ಪಾರ್ವತಮ್ಮ ರವರು ನನ್ನ 1 ನೇ ತಾತ

ದೊಡ್ಡ ಮುನಿಶಾಮಿ @ ತೇಲಿ ಮುನಿಶಾಮಿ ಹಾಗೂ ಸೀತಮ್ಮ ನ ಮಗಳೇ ಪಾರ್ವತಮ್ಮ ಎಂದರೆ ಸರಿ.

11. ನನ್ನ ತಂದೆ ಅಕ್ಕುಲಪ್ಪ ರವರು 2002 ರಲ್ಲಿ ತೀರಿಕೊಂಡಿರುತ್ತಾರೆ. ಸರ್ವೆ ನಂ.85 ರ 1 ಎಕರೆ 20 ಗುಂಟೆ ಜಮೀನು ನನ್ನ ತಂದೆಯ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ದೊಡ್ಡಪ್ಪನ ಮಗನಾದ ರೆಡ್ಡಪ್ಪ ಸದರಿ ಜಮೀನಿನ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

12. ದಾವಾ ಆಸ್ತಿ ಸಂಖ್ಯೆ 46 ರ ಜಮೀನಾದ ಸರ್ವೆ ನಂ 4/5 ರ 8 ಗುಂಟೆ ಜಮೀನಿದ್ದು ನನ್ನ ತಂದೆಯ ಹೆಸರಿಗೆ ಪವತಿವಾರಸು ಮೂಲಕ 4 ಗುಂಟೆ ಮಾತ್ರ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 46 ಹಾಗೂ 39 ಎರಡೂ ಒಂದೇ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 48 ಹಾಗೂ 32 ಕೂಡ ಎರಡೂ ಒಂದೇ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 48 ರಲ್ಲಿ ನನ್ನ ತಂದೆಯ ಹೆಸರಿಗೆ 1 ಎಕರೆ 7 ಗುಂಟೆ ಮಾತ್ರ ಪವತಿ ವಾರಸು ಮೂಲಕ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 49 ರಲ್ಲಿ ನನ್ನ ತಂದೆಯ ಹೆಸರಿಗೆ 14 ಗುಂಟೆ ಜಮೀನು ಮಾತ್ರ ಪವತಿವಾರಸು ಮೂಲಕ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 49 ಹಾಗೂ 15 ರ ಎರಡೂ ಜಮೀನುಗಳು ಒಂದೇ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ: 50 ಸರ್ವೆ ನಂ 233/1 ರ 1 ಎಕರೆ 36 ಗುಂಟೆ ಜಮೀನಿನಲ್ಲಿ ನನ್ನ ತಂದೆಗೆ ಕೇವಲ 37 ಗುಂಟೆ ಮಾತ್ರ ನನ್ನ ತಂದೆಯ ಹೆಸರಿಗೆ ಪವತಿವಾರಸು ಮೂಲಕ ಖಾತೆಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ: 50 ಹಾಗೂ 10 ರ ಎರಡೂ ಜಮೀನುಗಳು ಒಂದೇ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ: 53 ರಲ್ಲಿ 2 ಎಕರೆ 1 ಗುಂಟೆ ಜಮೀನು ಇದ್ದು ಅದರ ಪೈಕಿ ನನ್ನ ತಂದೆಯ ಹೆಸರಿಗೆ 39 ಗುಂಟೆ ಜಮೀನು ಮಾತ್ರ ಪವತಿವಾರಸು ಖಾತೆಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ: 53 ಹಾಗೂ 41 ರ ಎರಡೂ ಜಮೀನುಗಳು ಒಂದೇ ಎಂದರೆ ಸರಿಯಲ್ಲ.

13. ದಾವಾ ಆಸ್ತಿ ಸಂಖ್ಯೆ 46 ರಿಂದ 53 ರ ಆಸ್ತಿಗಳು ನನ್ನ ದೊಡ್ಡ ತಾತ ದೊಡ್ಡ ಮುನಿಶಾಮಿ @ ತೇಲಿ ಮುನಿಶಾಮಿ ರವರಿಗೆ ಸೇರಿದ್ದ ಆಸ್ತಿಗಳು ಎಂದರೆ ಸರಿ. ಮೂಲ ಪುರುಷ ಮುನಿಯಪ್ಪ ರವರಿಂದ ನಮ್ಮ ಕುಟುಂಬಕ್ಕೆ ಯಾವುದೇ ಆಸ್ತಿಗಳು ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡ ತಾತ ದೊಡ್ಡ ಮುನಿಶಾಮಿ @ ತೇಲಿ ಮುನಿಶಾಮಿ ರವರಿಗೆ ಆಸ್ತಿಗಳು ಹೇಗೆ ಬಂದವು ಎಂದು ನನಗೆ ಗೊತ್ತಿರುವುದಿಲ್ಲ ಹಾಗೂ ಈ ಬಗ್ಗೆ ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ 2 ನೇ ತಾತ ಚಿಕ್ಕ ಮುನಿಶಾಮಿ @ ಮುನಿಶಾಮಿ ರವರಿಗೂ ಕೂಡ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದು ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

14. ನನ್ನ ತಾತ ಚಂಗಪ್ಪನಿಗೂ ಯಾವುದೇ ಆಸ್ತಿಗಳು ಇದ್ದವಾ ಎಂದರೆ ಸಾಕ್ಷಿಯು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಚಂಗಪ್ಪ ರವರು ಮೂಲತಃ ಅಗರಂ ಗ್ರಾಮದವರು ಎಂದರೆ ಸರಿ. ಅವರು ಅಗರಂ ಗ್ರಾಮದಿಂದ ಬೇವಹಳ್ಳಿ ಗ್ರಾಮಕ್ಕೆ ವಲಸೆ ಬಂದಿದ್ದರು ಎಂದರೆ ಸರಿ. ನನ್ನ ತಾತ ಚಂಗಪ್ಪ ರವರ ಮದುವೆಯು ಅಗರಂ ಗ್ರಾಮದಲ್ಲಿಯೇ ಆಗಿದ್ದು, ತದನಂತರ ಅವರಿಗೆ ಜೀವನ ನಡೆಸಲು ಕಷ್ಟವಾಗಿದ್ದರಿಂದ ತನ್ನ ಹೆಂಡತಿ ಊರಾದ ಬೇವಹಳ್ಳಿ ಗ್ರಾಮಕ್ಕೆ ಬಂದು ವಾಸವಿದ್ದರು ಎಂದರೆ ಸರಿ.

15. ಕೊಂಡಕ್ಕನ ಮದುವೆಯು ಚಂಗಪ್ಪನೊಂದಿಗೆ ಆಗುವ ಸಮಯದಲ್ಲಿ ಚಂಗಪ್ಪ ಹಾಗೂ ನಮ್ಮ ಕುಟುಂಬಕ್ಕೂ ಯಾವುದೇ ಹಳೆಯ ಸಂಬಂಧ ಇತ್ತಾ ಎಂದರೆ ಸಾಕ್ಷಿಯು ಅದೇನೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮತ್ತು ಅವರ ನಡುವೆ ಯಾವುದೇ ಹಳೆಯ ಸಂಬಂಧ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಂಗಪ್ಪನಿಗೆ ತಮ್ಮ ಮೂಲ ಊರಾದ ಅಗರಂ ಗ್ರಾಮದಲ್ಲಿ ಜೀವನ ನಡೆಸಲು ಕಷ್ಟವಾಗಿದ್ದರಿಂದ ಬೇವಹಳ್ಳಿ ಗ್ರಾಮಕ್ಕೆ ಬಂದು ಮೂಲ ಪುರುಷ ಮುನಿಯಪ್ಪನ ಮಕ್ಕಳಾದ ದೊಡ್ಡ ಮುನಿಶಾಮಿ @ ತೇಲಿ ಮುನಿಶಾಮಿ ಹಾಗೂ ಚಿಕ್ಕ ಮುನಿಶಾಮಿ @ ಮುನಿಶಾಮಿ ರವರ ಮನೆಯಲ್ಲಿ ಇದ್ದರು ಎಂದರೆ ಸರಿ.

16. ನನ್ನ ತಾತ ಚಂಗಪ್ಪ ನಾನು ಹುಟ್ಟುವ ಮೊದಲೇ ತೀರಿಕೊಂಡಿದ್ದರು ಎಂದರೆ ಸರಿ. ನನ್ನ ತಾತ ಚಂಗಪ್ಪ 1950 ನೇ ಇಸವಿಯಲ್ಲಿ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ.

17. ದೊಡ್ಡ ಮುನಿಶಾಮಿ @ ತೇಲಿ ಮುನಿಶಾಮಿ ತೀರಿಕೊಂಡ ನಂತರ ಅವರ ಹೆಸರಿನಲ್ಲಿದ್ದ ಜಮೀನುಗಳೆಲ್ಲವೂ ಆತನ ಮಗಳಾದ ಹಾಗೂ ನನ್ನ ತಂದೆಯ 2 ನೇ ಹೆಂಡತಿಯಾದ ಪಾರ್ವತಮ್ಮನ ಹೆಸರಿಗೆ ಪವತಿವಾರಸು ಖಾತೆ ಆಯಿತು ಎಂದರೆ ಸರಿ. ಸದರಿ ಪಾರ್ವತಮ್ಮ ತೀರಿಕೊಂಡ ನಂತರ ನನ್ನ ತಂದೆ ಅಕ್ಕುಲಪ್ಪನ ಹೆಸರಿಗೆ ಪವತಿವಾರಸು ಖಾತೆ ಆಯಿತು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಾನು ಹಾಗೂ ನನ್ನ ಸಹೋದರ ನಾರಾಯಣಸ್ವಾಮಿ ಪವತಿವಾರಸು ಖಾತೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

18. ದಿನಾಂಕ 19.01.1985 ರಂದು ನನ್ನ ತಂದೆ ಮುಳಬಾಗಿಲು ಪಟ್ಟಣದಲ್ಲಿ ಒಂದು ನಿವೇಶನವನ್ನು ಖರೀದಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿ ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ನಿವೇಶನ ಈ ದಾವೆಯ ದಾವಾ ಬಿ ಷೆಡ್ಯೂಲ್ ನ 2 ನೇ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ನಿವೇಶನದ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ ಹಾಗೂ ಓದಿರುವುದಿಲ್ಲ. ಸದರಿ ನಿವೇಶನವನ್ನು ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿದೆ ಎಂದು ವಾದಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

19. ಬೈರಕೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಂದು ನಿವೇಶನ ನಮ್ಮ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ತಂದೆ ಸರ್ವೆ ನಂ 85/ಪಿ5 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಮೀನು ನಮ್ಮ ಹೆಸರಿನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಈವಾಗಲೂ ಕೂಡ ಸದರಿ ಜಮೀನಿನ ಪಹಣಿಯಲ್ಲಿ ನನ್ನ ಹಾಗೂ ನನ್ನ ಸಹೋದರ ನಾರಾಯಣಸ್ವಾಮಿ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಈ ಜಮೀನು ಕೂಡ ಒಟ್ಟು ಕುಟುಂಬದ ಜಮೀನು ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಓ ಎಸ್ ಸಂಖ್ಯೆ: 270/2016
ಪಿ.ಡಬ್ಲ್ಯೂ: 01 (ಸುಬ್ರಮಣಿ)

20. ದಾವಾ ಎ ಷೆಡ್ಯೂಲ್ ಆಸ್ತಿಯ ಪೈಕಿ ದಾವಾ ಆಸ್ತಿ ಸಂಖ್ಯೆ 3, 21, 25, 31 ಮತ್ತು 42 ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚುಪಡಿಸಲಾಯಿತು.)**

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.